# ತೃಣ-ಸಮಾನ

ನಮ್ಮ ಪಾಡೆಂದರೆ- ನಾವು ಮುಟ್ಟಿದ್ದೆಲ್ಲ ಜಡಗೊಳ್ಳುತ್ತ ಹೋಗುವುದು. ರೂಢಿಗತವಾಗಿ ಬಿಡುವುದು. ಯಾಂತ್ರಿಕವಾಗಿ ಬಿಡುವುದು. ಈ ಮೂಲಕವೇ ಒಂದು ರೀತಿಯಲ್ಲಿ ವ್ಯವಹಾರವು ಸುಗಮವೂ ಆಗಿ ಸುಗಮತೆಯೇ ಸುಖವೆನ್ನಿಸಿ, ಇದೊಂದು ಮೌಲ್ಯವೇ ಆಗಿಬಿಡುವುದು. ವ್ಯವಹಾರವು ಸುಗಮವಾಗಬಹುದು. ಆದರೆ ವ್ಯವಹಾರದಲ್ಲಿ ಜೀವ- ಸೆಲೆ ಮಾತ್ರ ಬತ್ತಿ ಹೋಗುವುದು. ನಮ್ಮ ಮನಸ್ಸನ್ನು ಆಳುತ್ತಿರುವ ಜಾತಿ- ಮತ- ಧರ್ಮ- ದೇವರು- ಭಕ್ತಿ ಇತ್ಯಾದಿ ಭಾವಗಳಲ್ಲಿ, ಈ ಜಡತೆಯು- ನಾವು ಸಮಾಜ ಜೀವಿಗಳೂ ಆಗಿರುವುದರಿಂದ ಜಡತೆಯೇ ಜೀವಂತಿಕೆ ಎಂಬ ತಪ್ಪು ತಿಳುವಳಿಕೆಗೆ ಕಾರಣವಾಗಿ ಸಾಮಾಜಿಕವಾಗಿ ಅಪಾಯಕಾರಿಯೂ ಆಗಬಹುದು.

ಆದರೆ ಮೂಲದಲ್ಲಿ ಹೀಗಿರಲಾರದು. ಭಕ್ತಿ ಎಂಬ ಪರಿಕಲ್ಪನೆಯನ್ನೇ ನೋಡಿ. ಶರಣ- ಶರಣೆಯರಾಗಲೀ, ಹರಿದಾಸರಾಗಲೀ ಇವರು ಭಕ್ತಿಯಿಂದ ಉದ್ದೀಪ್ತರಾದಾಗ- ನುಡಿದ ನುಡಿ, ಹಾಡಿದ ಹಾಡು ತಮ್ಮ ಜೀವಂತಿಕೆಯಿಂದ ಎಲ್ಲ ಕಾಲದಲ್ಲೂ ನಳನಳಿಸುತ್ತಿರುತ್ತದೆ. ಉದಾಹರಣೆಗೆ ಪುರಂದರದಾಸರ ಈ ಹಾಡನ್ನು ನೋಡಬಹುದು. ಹೂವತರುವವರ ಮನೆಗೆ ಹುಲ್ಲ ತರುವ ಅವ್ವ ಲಕುಮೀರಮಣ ಇವಗಿಲ್ಲಗರುವ ಎಂಬ ಹಾಡು. ಚಕಿತಗೊಳಿಸುವ ಈ ಒಂದು ಸಾಲೇ ಸಾಕು. ದೇವರನ್ನು ಹೇಗೆ ಎಲ್ಲಿ ನೋಡಬೇಕೆನ್ನುವ, ದೇವರ ನೆಲೆ- ನಿಲುವುಗಳು ಏನು ಎನ್ನುವ ಬಗೆಗೆ ನಮ್ಮ ದೃಷ್ಟಿಯೇ ಬದಲಾಗುತ್ತದೆ. ಒಂದು ತೀಡಿ ತಿದ್ದುವಿಕೆಗೆ ಒಳಗಾಗುತ್ತದೆ.

ಹೌದು. ಗೀತೆಯಲ್ಲಿ ಕೃಷ್ಣ ಹೇಳಿದ್ದುಂಟು. ಪತ್ರಂ ಪುಷ್ಪಂ ಫಲಂ ತೋಯಂ .... ನೀನು ಪ್ರೀತಿಯಿಂದ ಏನು ಕೊಟ್ಟರೂ ಒಂದು ದಳ; ಒಂದು ಎಸಳು; ಒಂದು ಹಣ್ಣು ಅಥವಾ ಒಂದು ಉದ್ಧರಣೆ ನೀರು ಯಾವುದೂ ಆಗಬಹುದು ಈ ಎಲ್ಲವೂ ಅತಿ ಸುಲಭದಲ್ಲಿ ಕೊಡಬಹುದಾದವುಗಳು- ಪ್ರೀತಿಯಿಂದ ಕೊಡುವೆಯಾದರೆ- ನಿರ್ಮಲ ಪ್ರೀತಿಯೊಂದೇ ತುಸುಕಷ್ಟ- ನಾನದಕ್ಕೆ ಕೈಯೊಡ್ಡುವೆ ಎಂದಿದ್ದ! ಅಂದರೆ ಅಂಥ ಪ್ರೀತಿಗೆ ನಾನು ಹಸಿದಿರುವೆ; ಹಂಬಲಿಸುತ್ತಿರುವೆ ಎಂದಿದ್ದ. ಪ್ರೀತಿಗೂ ಮುಗ್ಧ ಪ್ರಕೃತಿಗೂ ಸಂಬಂಧ. ಒಂದು ಎಲೆ; ಒಂದು ಹೂ; ಒಂದು ಹಣ್ಣು, ಗಿಡದ ತುದಿಯಲ್ಲಿ ನಿಂತ ಒಂದು ಬಿಂದು ಇಬ್ಬನಿ ಅಥವಾ ಯಾವುದೋ ದುಃಖದಿಂದ ಕಣ್ಣು ತುಂಬಿಯೂ ತುಳುಕದೆನಿಂತ ಕಂಬನಿ- ಇವುಗಳೊಡನೆ ಪ್ರೀತಿಗೆ ಸಂಬಂಧ. ಚಿನ್ನ, ಬೆಳ್ಳಿ ಮುತ್ತು, ರತ್ನ, ವಜ್ರದ ಕಿರೀಟ ಇಂಥವುಗಳ ಜೊತೆಗಲ್ಲ. ದೇವರಿಗೆ ಈ ಲೋಕದಲ್ಲಿ ಬೆಲೆಬಾಳುವುದನ್ನು ಅರ್ಪಿಸಬೇಕೆನ್ನುವ ತಿಳುವಳಿಕೆಯೇ ಜಡ ತಿಳುವಳಿಕೆ. ಅದು ದೊಡ್ಡದನ್ನು ಅರ್ಪಿಸುವವರು ದೊಡ್ಡವರೆನ್ನುವ ಈ ಲೋಕದ ಭ್ರಾಂತಿಯಷ್ಟೆ.

ಕೃಷ್ಣ ಹೀಗೆ ಹೇಳಿದ್ದ. ಆದರೆ, ತನಗೆ ಹಸಿರೆಲೆಯಂಥ ಪ್ರೀತಿ, ಹೂಪರಿಮಳದಂಥ ಪ್ರೀತಿ, ಹಣ್ಣಿನಂಥ ಹಳದಿ ಮಾಗಿದ ಪ್ರೀತಿ, ಕನ್ನಡಿಯಂಥ ನೀರಿನ ಪ್ರೀತಿ ಕೊಟ್ಟೆಯಾದರೆ ಮರಳಿ ತಾನೇನು ನೀಡುವೆನೆಂದು ಕೃಷ್ಣ ಹೇಳಿರಲಿಲ್ಲ. ಪ್ರಾಯಃ ಅದನ್ನು ಹೇಳಲು ದಾಸನಿಗೆ ಬಿಟ್ಟಿರಬೇಕು. ದಾಸ ಹಾಡುತ್ತಾನೆ: ಹೂವ ತರುವವರ ಮನೆಗೆ ಹುಲ್ಲ ತರುವ

ಪ್ರೀತಿಯಿಂದ ಹೂ ನೀಡಿದವರ ಮನೆಯ ಗುರುತು ಕೃಷ್ಣ ಮರೆಯೋದುಂಟೆ? ಆ ಮನೆಗೆ ಕೃಷ್ಣ ಹುಲ್ಲಿನ ಹೊರೆ ಹೊತ್ತು ತರುತ್ತಾನೆ! ಏಕೆ? ಮನೆಯ ಹಸುಗಳಿಗೆ ಹುಲ್ಲು ಬೇಕಲ್ಲ! ನೀವು ಕೃಷ್ಣನನ್ನು ಪ್ರೀತಿಸಿದಿರಿ. ಅವನು ನಿಮ್ಮನ್ನು ಮಾತ್ರವಲ್ಲ; ನೀವು ಪ್ರೀತಿಸುವ ನಿಮ್ಮ ಮನೆಯ ಹಸುವನ್ನೂ ಪ್ರೀತಿಸುತ್ತಾನೆ. ಪ್ರೀತಿಸೋದೆಂದರೆ ಅದರ ಸೇವೆ ಮಾಡೋದು ಎಂಬುದನ್ನೂ ತೋರಿಸುತ್ತಾನೆ! ಈ ಮೂಲಕ ಪ್ರೀತಿಯ ನಿಜವಾದ ಪ್ರಪಂಚವನ್ನು ನಿಮ್ಮ ಮುಂದೆ ತೆರೆಯುತ್ತಾನೆ.

ಇಷ್ಟೇ ಅಲ್ಲ; ನಮ್ಮ ನುಡಿಗಟ್ಟನ್ನೇ ಅವನು ಬದಲಾಯಿಸುತ್ತಾನೆ. ಲೋಕದಲ್ಲಿ ನಾವು ಕಲಿತ ನುಡಿಗಟ್ಟು ಇದು. ತೃಣ ಸಮಾನ ಎಂಬ ನುಡಿಗಟ್ಟು. ಹುಲ್ಲಿಗಿಂತ ಕಡೆ ಎಂಬ ನುಡಿಗಟ್ಟು. ನಮ್ಮ ದೃಷ್ಟಿಯಲ್ಲಿ ಈ ಲೋಕದಲ್ಲಿ ಬೆಲೆ ಇಲ್ಲದುದಕ್ಕೆ ನಾವು ಯಾವ ಎಗ್ಗೂ ಇಲ್ಲದೆ ಬಳಸುವ ನುಡಿಗಟ್ಟಿದು. ನಮ್ಮಂತೆಯೇ ಇರುವ ಮನುಷ್ಯರಿಗೂ ಈ ನುಡಿಗಟ್ಟು ಬಳಸಲು ನಾವು ಹೇಸುವುದಿಲ್ಲ! ಅದರೆ ತಲೆಯ ಮೇಲೆ ಹುಲ್ಲು ಹೊತ್ತು ತರುವ ಕೃಷ್ಣ, ಹುಲ್ಲಿಗೆ ಯಾವುದು ಸಮಾನ ಎಂದು ಅಚ್ಚರಿ ತೋರಿಸಿ ನುಡಿಗಟ್ಟು ಬದಲಿಸಿಬಿಟ್ಟ! ನುಡಿ ಬದಲಾಯಿತೆಂದರೆ ನಡೆಯೂ ಬದಲಾದಂತೆಯೇ.

ಹುಲ್ಲುಕಡ್ಡಿಯೂ ಅವನ ಇಚ್ಛೆ ಇಲ್ಲದೆ ಅಲುಗಾಡದು ಎನ್ನುವ ತತ್ವಜ್ಞಾನಿಗಳಿಗೆ ಕೂಡ ಅವನ ಇಚ್ಛೆ ಹುಲ್ಲುಕಡ್ಡಿಗೆ ಗೊತ್ತಾಗುವಂತೆ ಇತರರಿಗೆ ಗೊತ್ತಾಗದು ಎಂದು ದಾಸರ ಹಾಡು ಕಲಿಸುತ್ತದೆ! ಇದು ಜೀವಂತ ಅನುಭವ! ದಾಸನ ಮೂಲಕ ದೇವರು ಲೋಕಕ್ಕೆ ಪ್ರಕಟಗೊಳ್ಳುವ ಪರಿ. ನಾವು ಭಕ್ತಿ ಎನ್ನುವ ಚೌಕಟ್ಟು ಕೂಡ ಹಾಕಿಕೊಳ್ಳಬೇಕಿಲ್ಲ. ಜೀವಂತವಾದುದಕ್ಕೆಲ್ಲ ಈ ನಳನಳಿಸುವ ಗುಣ ಇರುತ್ತದೆ. ನಮ್ಮ ಕನ್ನಡದ ಜೀವಯಾನದ ಮಂಜುನಾಥರ ಈ ಕವನವನ್ನು ನೋಡಿ:

ದೇವರೇ
ನೀನೊಂದು ಅಸಹಾಯಕ ಮಗು
ನಾವಿದ್ದು ನಿನ್ನ ಸೇವೆ ಮಾಡುವೆವು
ನಾವು ದುಡಿದು ನಿನಗೆ ಸಂತೋಷ ತರುವೆವು
ಕೊಳದಲ್ಲಿ ಬಾತುಗಳು ಆಡುತ್ತಿವೆ.
ಕಣಿವೆಯಲ್ಲಿ ಝರಿ ಬೀಳುತ್ತಿದೆ
ಹುಂಜ ಹೇಂಟೆಗೆ ನೆಗೆದು ಹಾರುತ್ತಿದೆ
ಬಸವನ ಹುಳು ನಿನ್ನೆಡೆಗೇ ಸರಿಯುತ್ತಿದೆ
ಎತ್ತಿಕೊಡುವೆವು ತಗೋ ಈ ಎಲ್ಲವನ್ನೂ
ಕೃಪೆ ಹೊಂದಿ ಭಾಗ್ಯವಂತನಿರು ನೀನು

ದುಗುಡಗೊಂಡ ಒಂದು ಮಗುವನ್ನು ಸಂತೈಸುವಂತೆ, ಅದನ್ನು ಕುರಿತೇ ಒಂದು ಹೊಸ ಪದ (ಅಸಹಾಯಕ ಮಗು) ಅದಕ್ಕೆ ಕಲಿಸುವಂತೆ, ಸುತ್ತಲಿನ ವಿವರಗಳನ್ನೆಲ್ಲ ಚೋದ್ಯಗಳನ್ನೆಲ್ಲ ಮಗುವಿಗೆ ತೋರಿಸುವಂತೆ, ಇದೆಲ್ಲ, ನಿನ್ನದೇ; ಮತ್ತಾರದು ಎನ್ನುವಂತೆ, ಎಂಥ ಪುಣ್ಯವಂತನಲ್ಲವೆ ನೀನು ಎಂದು ಕೊಂಡಾಟ ಮಾಡುತ್ತಿದೆ ಕವನ. ಕೃಪೆ ಹೊಂದಿ ಎಂಬ ನುಡಿ ಗಮನಿಸಬೇಕು. ಕೃಪೆ ಮಾಡಿ ಅಲ್ಲ; ಕೃಪೆ ಹೊಂದಿ. ಕವಿ, ತನ್ನ ಭಾಗ್ಯವನ್ನೆಲ್ಲ ಈ ಮಗುವಿನ ಮೇಲೆ ಸುರಿಯುತ್ತಿದ್ದಾನೆ. ತನ್ನದೇ ನುಡಿಯನ್ನು ಕೂಡಾ! ದೇವರಿಗೆ ಇದು ವಾತ್ಸಲ್ಯದ ಅನುಭವ!

■ ತೋಷ

## ಮಾತೇ ಮುತ್ತು

★ ಕೇವಲ ಹಣವನ್ನು ಮಾತ್ರ ಮಾಡುವ ಉದ್ಯಮ, ಅತ್ಯಂತ ಬಡ ಉದ್ಯಮ.

-ಹೆನ್ರಿ ಫೋರ್ಡ್

★ ಲೇಖಕನೊಬ್ಬ ಪ್ರತಿರೋಧವನ್ನು ಹುಟ್ಟಿಸದಿದ್ದರೆ ಆತ ಸತ್ತಿದ್ದಾನೆ ಎಂದರ್ಥ.

-ವಿ.ಎಸ್.ನೈಪಾಲ್

★ ಟೆನಿಸ್ ಚೆಂಡಿಗೆ ನಾನು ಗಂಡೋ, ಹೆಣ್ಣೋ, ಕಮ್ಯುನಿಸ್ಟಳೋ, ಕ್ಯಾಪಿಟಲಿಸ್ಟಳೋ ಏನೂ ಗೊತ್ತಿಲ್ಲ. ಕ್ರೀಡೆ ಎಲ್ಲ ಗಡಿಗಳನ್ನೂ ಮೀರಿದ್ದು.

-ಮಾರ್ಟಿನಾ ನವ್ರಾಟಿಲೊವಾ

★ ಹಿಂಸೆಯಿಂದ ಒಳಿತಾದರೆ ಅದು ತಾತ್ಕಾಲಿಕ. ಹಿಂಸೆಯಿಂದ ಉಂಟಾಗುವ ಕೆಡುಕು ಶಾಶ್ವತ.

-ಮಹಾತ್ಮ ಗಾಂಧೀಜಿ

★ ಇತರರಿಗಾಗಿ ಜೀವಿಸುವವನದ್ದು ಮಾತ್ರ ನಿಜವಾದ ಜೀವನ.

-ಸ್ವಾಮಿ ವಿವೇಕಾನಂದ

★ ಮನುಷ್ಯನಾಗಿರುವುದು ಬಹಳ ಸುಲಭ; ಆದರೆ ಮಾನವೀಯವಾಗಿರುವುದು ಬಹಳ ಕಷ್ಟ.

-ಮಿರ್ಜಾ ಘಾಲಿಬ್

★ ಒಬ್ಬನ ಮೇಲೆ ವಿಶ್ವಾಸ ಇಡಬಹುದೇ ಎನ್ನುವುದನ್ನು ಪರೀಕ್ಷಿಸಲು ಅತ್ಯುತ್ತಮ ವಿಧಾನ, ಆತನ ಮೇಲೆ ವಿಶ್ವಾಸ ಇಡುವುದು.

-ಅರ್ನೆಸ್ಟ್ ಹೆಮಿಂಗ್ವೇ

★ ಜನರ ಬಳಿಗೆ ಹೋಗಿರಿ, ಅವರಿಂದ ಕಲಿಯಿರಿ, ಅವರ ಜತೆಗೆ ಬದುಕಿ. ಆಗಲೇ ಶ್ರೇಷ್ಠ ನಾಯಕ ಹುಟ್ಟುವುದು.

-ಲಾವೊ ತ್ಸೆ

★ ಜನ ಯಾವಾಗಲೂ ತಮಗಿಂತ ಎತ್ತರದಲ್ಲಿ ಇರುವವರನ್ನು ಹಿಂಬಾಲಿಸಲು ಬಯಸುತ್ತಾರೆ.

-ಚೇನೀ ಗಾದೆ